ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ನಡೆದ ಅಪಘಾತಗಳ ವಿವರ ಮತ್ತು ಕೈಗೊಂಡ ಕ್ರಮ.

2183(2803)

ಶ್ರೀ ಅಂಜನಾ ಮೂರ್ತಿ(ನೆಲಮಂಗಲ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ 4ರಲ್ಲಿ ತುಮಕೂರು-ನೆಲಮಂಗಲ ಮಧ್ಯೆ 1998ರಿಂದ ಜನವರಿ 2000 ಇಸವಿವರೆಗೆ ಎಷ್ಟು ವಾಹನಗಳಿಗೆ ಅಪಘಾತಗಳು ಆಗಿವೆ. ಆದ ಸಾವು ನೋವುಗಳ ಸಂಖ್ಯೆ ಎಷ್ಟು?

ಆ) ಕರ್ನಾಟಕದ ಯಾವ ಯಾವ ಭಾಗದಲ್ಲಿ ಹೆಚ್ಚು ಅಪಘಾತಗಳು ನಡೆಯುತ್ತಿವೆ?

ಇ) ಇದಕ್ಕೆ ಸಂಬಂಧಿಸಿದಂತೆ ತುರ್ತಾಗಿ ಚಿಕಿತ್ಸೆ ನೀಡಿ ಪ್ರಾಣ ಉಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ.

ಈ) ನೆಲಮಂಗಲ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಂದು ತುರ್ತು ಘಟಕ (ಅತ್ಯಾಧುನಿಕ ಸೌಲಭ್ಯವುಳ್ಳ) ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ರಾಷ್ಟ್ರೀಯ ಹೆದ್ದಾರಿ ತುಮಕೂರು-ನೆಲಮಂಗಲ ಮಧ್ಯೆ ಅಪಘಾತಗಳ ವಿವರ.

ವರ್ಷ	ಅಪಘಾತಕ್ಕೆ ಈಡಾದ ವಾಹನಗಳ ಸಂಖ್ಯೆ	ಮರಣಹೊಂದಿದವರ ಸಂಖ್ಯೆ	ಗಾಯಗೊಂಡವರ ಸಂಖ್ಯೆ
1998	496	87	340
1999	461	108	360
2000 (ಮಾರ್ಚ್‌ವರೆಗೆ)	42	07	23

ಆ) ಕಳೆದ 2 ವರ್ಷಗಳ ಅಪಘಾತಗಳ ವಿಶ್ಲೇಷಣೆ ಈ ಕೆಳಗಿನಂತಿವೆ.

	1998	1999
1)	ಬೆಂಗಳೂರು ನಗರ - 8384	ಬೆಂಗಳೂರು ನಗರ - 7906

2) ಬೆಂಗಳೂರು ಜಿಲ್ಲೆ - 2316 ಬೆಂಗಳೂರು ಜಿಲ್ಲೆ - 2087

3) ಬೆಳಗಾವಿ - 1481 ತುಮಕೂರು - 1656

ಮೇಲಿನ ವಿಶ್ಲೇಷಣೆಯಿದ ಬೆಂಗಳೂರು ನಗರದಲ್ಲಿ ಅಪಘಾತಗಳು ಹೆಚ್ಚಾಗಿದ್ದು ಕ್ರಮವಾಗಿ ಬೆಂಗಳೂರು ಜಿಲ್ಲೆ ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳು ರಾಜ್ಯದಲ್ಲಿ ಹೆಚ್ಚು ಅಪಘಾತಗಳು ಸಂಭವಿಸುವ ಸ್ಥಳಗಳಾಗಿವೆ.

ಇ) ರಾಷ್ಟ್ರೀಯ ಹೆದ್ದಾರಿ-4 ರಲ್ಲಿ ನೆಲಮಂಗಲ-ದಾಬಸ್‌ಪೇಟೆ ನಡುವೆ ಸಂಚಾರಿ ಪ್ರಥಮ ಚಿಕಿತ್ಸೆ ಘಟಕ ತೆರೆದಿದ್ದು, ತುರ್ತು ಪ್ರಕರಣಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅಪಘಾತ ಸ್ಥಳಗಳಲ್ಲಿ ನೆರವಾಗಲು ತುಮಕೂರು-ನೆಲಮಂಗಲ, ದಾಬಸ್ ಪೇಟೆಗಳಲ್ಲಿ ಆಂಬುಲೆನ್ಸ್ ಸೇವೆಯನ್ನು ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಅಲ್ಲಲ್ಲಿ ಸಂಚಾರಿ ಉಕ್ಕಡ ಠಾಣೆಗಳು ಸಹ ಕಾರ್ಯ ನಿರ್ವಹಿಸುತ್ತಿವೆ.

ಈ) ಹೌದು. ವಿಶ್ವ ಭ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಸಂಭವಿಸುವ ಅಪಘಾತಗಳಲ್ಲಿ ಗಾಯಗೊಂಡವರಿಗೆ ತುರ್ತು ಚಿಕಿತ್ಸೆ ನೀಡುವ ಸಲುವಾಗಿ, ಗರಿಷ್ಠ 50 ಕಿ.ಮಿ. ಅಂತರದಲ್ಲಿ ಅಪಘಾತ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗುವುದು. ಇಂತಹ ಒಂದು ಘಟಕವನ್ನು ನೆಲಮಂಗಲ ನಗರದಲ್ಲಿಯೂ ಸ್ಥಾಪಿಸುವ ಯೋಜನೆಯಿದ್ದು ಘಟಕಕ್ಕೆ ಅಗತ್ಯವಾದ ಕಟ್ಟಡಗಳು ಪೂರ್ತಿಗೊಂಡಿದ್ದು, ಸಲಕರಣೆ ಮತ್ತು ಸಿಬ್ಬಂದಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಘಟಕವು ಸಧ್ಯದಲ್ಲಿಯೇ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ರಾಜ್ಯದ ತೆರಿಗೆ ಆದಾಯದ ವಿವರಗಳ ಕುರಿತು.

2186(2763)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಹಣಕಾಸು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ರಾಜ್ಯದ ತೆರಿಗೆ ಆದಾಯ ಎಷ್ಟು, ತೆರಿಗೆಯೇತರ ಆದಾಯ ಎಷ್ಟು? ಕೇಂದ್ರದಿಂದ ಬಂದಿರುವ ಸ್ವೀಕೃತಿ ಹಣ ಎಷ್ಟು?

ಆ) ಕೇಂದ್ರ ಸರ್ಕಾರಕ್ಕೆ ಮತ್ತು ವಿವಿಧ ಹಣಕಾಸು ಸಂಸ್ಥೆಗಳಿಗೆ ನೀಡಬೇಕಾಗಿದ್ದ ಸಾಲದ ಮೊತ್ತ ಹಾಗೂ ಇದರ ಬಡ್ಡಿಯೆಷ್ಟು. ಈ ಪೈಕಿ ಕಳೆದ 5 ವರ್ಷಗಳಲ್ಲಿ ರಾಜ್ಯ